ತಾಲ್ಲೂಕು ಬರಗಾಲಕ್ಕೆ ತುತ್ತಾಗುವ ಪ್ರದೇಶವಾಗುತ್ತಿದೆ. ಮಳೆ ಕೂಡ ಇಲ್ಲ. ಹಿಂದೆ ನಾಗ ಮಂಗಲದ ತಾಲ್ಲೂಕು ಬರಗಾಲದ ಪ್ರದೇಶ ಎಂದು ಹೇಳುತ್ತಿದ್ದರು. ಈಗ ಎಲ್ಲಿಗೆ ಹೇಮಾವತಿಯ ಮೂಲಕ ನೀರು ಕೊಡುವ ಅನುಕೂಲ ಬಂದಿರುವುದರಿಂದ ಅಲ್ಲಿನ ಜನಕ್ಕೆ ಸ್ವಲ್ಪ ಅನುಕೂಲವಾಗಿದೆ. ಅದೇ ರೀತಿ ನಮ್ಮ ಮಾಗಡಿ ತಾಲ್ಲೂಕಿಗೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಯೋಜನೆ ನೀರು ಬರುತ್ತೆ ಎಂದು ಇತ್ತು. ಈಗ ಅಲ್ಲೂ ಕೂಡ ನೀರು ಕೊಡುವುದಿಲ್ಲ ಎಂದು ಗೊತ್ತಾಗುತ್ತಿದೆ. ಇದರಿಂದ ತಿಪ್ಪಗೊಂಡನಹಳ್ಳಿಯ ಮೂಲಕ ಬೆಂಗಳೂರಿಗೆ ನೀರು ಹೊದಗಿಸುತ್ತಿದ್ದಾರೆ. ಆದುದರಿಂದ ನಮ್ಮ ತಾಲ್ಲೂಕಿನಲ್ಲಿ ಅನೇಕ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮಾಡಬೇಕೆಂದು ಇದ್ದಾರೆ. ಸುಮಾರು 20 ಪ್ರಾಜೆಕ್ಟುಗಳಾಗಬೇಕೆಂದು ಇಲ್ಲಿಂದ ಸಲಹೆಗಳನ್ನು ಕೂಡ ಸರಕಾರಕ್ಕೆ ಕಳುಹಿಸಲಾಗಿದೆ. ಇದರ ಕಡೆಗೆ ಹೆಚ್ಚು ಲಕ್ಷ ಕೊಟ್ಟು ಸರಕಾರದವರು ಮಾಡಿಸಿ ಕೊಡಬೇಕೆಂದು ಕೇಳುತ್ತೇವೆ. ಬೆಂಗಳೂರಿಗೇನೋ ಕಾವೇರಿ ನೀರಿನ ಯೋಜನೆ ತಂದು ನೀರು ಕೊಡುತ್ತಿದ್ದಾರೆ. ಆದುದರಿಂದ ನಮ್ಮ ಭಾಗದ ಜನಕ್ಕೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ವ್ಯವಸಾಯಕ್ಕೆ ನೀರನ್ನು ನೀರಿನ ಅಭಾವ ಹೆಚ್ಚಾಗಿರುವುದರಿಂದ ಬೇಗನೆ ಲಿಫ್ಟ್ ಇರಿಗೇಷನ್ ಮೂಲಕ ನೀರಾವರಿ ಯೋಜನೆ ಕಾರ್ಯಗತವಾಗುವ ಹಾಗೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದನ್ನು ಮಾಡಿದರೆ ಇಲ್ಲಿ ವ್ಯವಸಾಯ ಮಾಡುವ ರೈತರು ಉಳಿಯುತ್ತಾರೆ. ಇಲ್ಲದಿದ್ದರೆ ಜನರಿಗೆ ತುಂಬಾ ಕಷ್ಟವಾಗುತ್ತದೆ. ನಮ್ಮ ಮಾಗಡಿ ತಾಲ್ಲೂಕು ಸುಮಾರು 30—40 ಮೈಲಿಗಳ ದೂರದಲ್ಲಿದೆ. ಹಿಂದೆ ಡೈರಿ ಯೋಜನೆ ಮಾಡಿದಾಗ ಸರ್ಕಾರದ ಡೈರಿಯವರು ಹಾಲನ್ನು ಸುಮಾರು 3 —4 ಮೈಲ ದೂರವಿರುವ ಕಡೆಗಳಿಂದ ಹಾಲನ್ನು ತೆಗೆದುಕೊಂಡು ಬರುತ್ತಾರೆ ಎಂದು ಇತ್ತು. ಆದರಂತೆ ನಮ್ಮ ಮಾಗಡಿ ತಾಲ್ಲೂಕಿನ ರೈತರೂ ಹಾಲನ್ನು ಡೈರಿಗೆ ಕೊಡಲು ಸಿದ್ಧವಾಗಿದ್ದರೂ ಕೂಡ ಇದುವರೆಗೆ ಡೈರಿ ಇನ್ಸಾಪೆಯವರು ಇಲ್ಲಿಗೆ ಬಂದು ಹಾಲನ್ನು ತೆಗೆದುಕೊಂಡು ಹೋಗುವ ಹಾಲಿನ ವ್ಯಾನ್ ಕೂಡ ಇಲ್ಲ. ಇಲ್ಲಿನ ರೈತರು ಬೇರೆ ಕಡೆ ಹಾಲಿನ ವ್ಯಾಪಾರ ಮಾಡಬೇಕಾಗಿದೆ ಇದರಿಂದ ಅನೇಕ ರೀತಿಯಲ್ಲಿ ಕಳೆದುಕೊಳ್ಳುತ್ತಿದ್ದಾರೆ. ಇದರ ಕಡೆಗೆ ಗಮನ ಕೊಟ್ಟು ಇಲ್ಲಿಂದ ಹಾಲನ್ನು ಡೈರಿಗೆ ತರುವ ವ್ಯವಸ್ಥೆ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಹಾಗಡಿ ತಾಲ್ಲೂಕಿನ ಸುತ್ತ ಅರಣ್ಯ ಪ್ರದೇಶಗಳಿವೆ. ಇದನ್ನು ಅಭಿವೃದ್ಧಿ ಮಾಡಬೇಕು ಮತ್ತು ಕುರಿ ತಳಿ ಅಭಿವೃದ್ಧಿ ಮಾಡುವ ಕೇಂದ್ರವನ್ನು ತೆರೆದು ಇದರಿಂದ ಜನತೆಗೆ ಅನುಕೂಲವಾಗುವಂತೆ ಮಾಡಬೇಕು. ಮತ್ತು ನಮ್ಮ ಕಡೆ ಇರುವ ದನಕರುಗಳಿಗೆ ಅನುಕೂಲವಾಗುವಂತೆ ವೆಟರ್ನರಿ ಆಸ್ಪತ್ರೆಗಳನ್ನು ಹೆಚ್ಚು ಹೆಚ್ಚಾಗಿ ತೆರೆಯಬೇಕು ಮತ್ತು ನಮ್ಮ ಕಡೆ ಇರುವ ಪಾನುವಾರುಗಳಿಗೆ ಸಹಾಯ ಮಾಡಲುಬೇಕು. ಇಷ್ಟು ಹೇಳಿ ಮಾತಾಡಲು ಅವಕಾಶ ಮಾಡಿಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Business of the House

Mr. DEPUTY SPEAKER.—The Business Advisory Committee at a sitting held to-day has decided that the House may have two sittings tomorrow from 9-00 A.M. to 12-00 noon and from 1-00 A.M. to 6-00 P.M. to transact the following business :

Morning Session

1. The Karnataka Appropriation Bill, 1975

2. The Karnataka Civil Services (Classification and Scale of Pay of Non-graduate Junior Engineers of the Public Works Department) Bill, 1975

3. Reply to the debate on the Demands for grants relating to the Minister for Agriculture and Animal Husbandary.

The business already scheduled for tomorrow will be transacted in the afternoon sitting.

The House now stands adjourned to meet tomorrow at 9-00 A.M.

The House adjourned Forty Five minutes past Six of the Clock to meet again at Nine of the Clock on Wednesday, the 19th March 1975.